(*b*) Instructions have been issued to take up well works in all the villages of the State where no drinking water wells exist during this year only.

List

List of villages of Ron taluk where no drinking water wells exist.

1	Nagaral	14	Honnapur
2	Belavanki	15	Hiremannur
3	Hullur	16	Karadgi
4	Gujvagadi	17	D. S. Hadagali.
5	Yerebeleri	18	Malwad
6	Hoshalli	19	Amargol
7	Benhal	20	Yavgal
8	Y. S. Hadagali	21	Kalakapur
9	Megur	22	Kajageri
10	Mallapur	23	Vadasole
11	Mykaljeri	24	Kuruvinkoppa
12	Hole Alur	25	Gadgali
13	Halkeri	26	Menasagi

ಶ್ರೀ ಎ. ವಿ. ಪಾಟೀಲ್.—ಕೇವಲ 26 ಹಳ್ಳಿಗಳಲ್ಲ ಕುಡಿಯುವ ನೀರಿನ ಬಾವಿಗಳು ಇಲ್ಲ ಎಂದು ಹೇಳಿದ್ದೀರಿ ? ನನಗೆ ತಿಳಿದಮಟ್ಟಿಗೆ ರೋಣ ತಾಲ್ಲೂಕಿನಲ್ಲಿ 50 ಕ್ಕಿಂತ ಹೆಚ್ಚಿಗೆ ಹಳ್ಳಿಗಳಲ್ಲ ಕುಡಿಯುವ ನೀರಿನ ಬಾವಿಗಳಿಲ್ಲ ; ಲಿಸ್ಟಿನಲ್ಲಿ ತಪ್ಪು ಇದೆ; ಅದನ್ನು ಪುನರ್‌ವಿಮರ್ಶೆ ಮಾಡುತ್ತೀರಾ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—26 ಹಳ್ಳಿಗಳಲ್ಲ ಕುಡಿಯುವ ನೀರಿನ ಬಾವಿಗಳು ಇಲ್ಲ. ರೋಣ ತಾಲ್ಲೂಕಿನಲ್ಲ 94 ಹಳ್ಳಿಗಳು ಇವೆಯೆಂದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಎ. ವಿ. ಪಾಟೀಲ್.—ಮತ್ತೊಮ್ಮೆ ವಿವರಗಳನ್ನು ತರಿಸಿಕೊಂಡು ಪುನಃ ಚೌಕಾಸಿ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಚೌಕಾಸಿ ಮಾಡೋಣ.

Allotment of Excise auction amount to T.D.Bs. and V.Ps.

775. Sri K. M. DORAISWAMY NAIDU (Bethamangala).—

Will the Chief Minister be pleased to state :—

(*a*) whether there is any proposal before the Government to allot 50 per cent of amount collected from Excise auction in the State to Taluk Development Boards and Village Panchayats to improve their financial position ;

(*b*) if so, from when ?

Sri D. DEVARAJ URS (Chief Minister).—

(*a*) No.

(*b*) Does not arise in view of reply to the above question.

ಶ್ರೀ ಕೆ. ಎಂ: ದೊರಸ್ವಾಮಿ ನಾಯ್ಡು.—ಈ ರೀತಿ ಸೇರಿದ 50ವಷ್ಟು ಪೊಲೀಸರು ತಾಲ್ಲೂಕು ಬೋರ್ಡ್‌ಗಳು ಮತ್ತು ವಿಲೇಜ್ ಪಂಚಾಯತಿಗಳಿಗೆ ಕೊಡಬೇಕೆಂದು ಸರ್ಕಾರಕ್ಕೆ ಮನವಿಗಳು ಬಂದಿವೆಯೇ?

† ಶ್ರೀ ಡಿ. ದೇವರಾಜ ಅರಸ್.—ಇಲ್ಲ.

ಶ್ರೀ ಕೆ. ಎಂ. ದೊರಸ್ವಾಮಿ ನಾಯ್ಡು.—ಬಂಗಾರು ಪೇಟೆಯಿಂದ 7-8 ತಿಂಗಳು ಹಿಂದೆ ರೆಜಲ್ಯೂಷನ್ ಮುಖಾಂತರ ಕಳುಹಿಸಿಕೊಟ್ಟಿದೆ!

ಶ್ರೀ ಡಿ. ದೇವರಾಜ್ ಅರಸ್.—ಅದನ್ನು ನೋಡಿಸೋಣ, ಆದರೆ ಎಕ್ಸ್‌ಸೈಜ್ ಬಾಬಿನಿಂದ ತಾಲ್ಲೂಕು ಬೋರ್ಡಿಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಬಿ. ಬೈರಪ್ಪಾಜಿ —ತಾಲ್ಲೂಕು ಬೋರ್ಡು ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲ. ಅವರು ಅನೇಕ ರೀತಿಯ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾಗಿದೆ. ಅವುಗಳಿಗೆ ಬರತಕ್ಕ ಆದಾಯ ಏನೇನೂ ಸಾಲದು. ಜನಗಳು ಕೊಡುವ ಪಂಚಿಕೆ ಅವರು ಕೊಟ್ಟುಂಥ ಹಣವನ್ನು ಕನಿಷ್ಟಪಕ್ಷ 25 ಭಾಗ ಸರ್ಕಾರ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.—ಈಗ ಜನಗಳಿಂದಲೇ ಬಂದಂತ ಹಣ ಸರ್ಕಾರಕ್ಕೆ ಬರತಕ್ಕದ್ದು ತಾಲ್ಲೂಕು ಬೋರ್ಡಿಗೆ ಕೊಡಲು ಸರ್ಕಾರಕ್ಕೆ ಬರಲಿ, ಜನಗಳಿಂದ ಬಂದಂತ ಹಣವೇ ಜನಕ್ಕೆ ಖರ್ಚು ಮಾಡುವುದು. ಆದರೆಲ್ಲಿ ಒಂದು ಭಾಗ ನೇರವಾಗಿ ತಾಲ್ಲೂಕು ಬೋರ್ಡಿಗೆ ಕೊಡಿ ಎಂದು ಹೇಳುವುದು ಬೇರೆ ಪ್ರಶ್ನೆ. ಈಗ ಇರತಕ್ಕ ಆಕ್ಟ್ ಪ್ರಕಾರ ಭೂಕಂದಾಯದ ಒಂದು ಭಾಗ ಕೊಡಬೇಕು ಎಂದು ಇದೆ. ತಾಲ್ಲೂಕು ಬೋರ್ಡಿನವರು ತಮ್ಮ ರಿಸೋರ್ಸ್ ಯಾವರೀತಿ ಹೆಚ್ಚಿಸಬಹುದು? ತಾಲ್ಲೂಕು ಬೋರ್ಡಿಗೆ ಹೆಚ್ಚು ಹಣ ಕೊಡಬೇಕಾದರೆ ಯಾವ ಯಾವ ಡಿಪಾರ್ಟ್‌ಮೆಂಟ್ ತಾಲ್ಲೂಕು ಬೋರ್ಡ್ ಕೆಲಸ ವಹಿಸುತ್ತದೆ ಅದು ಕೊಡುತ್ತದೆ. ಎಕ್ಸ್‌ಸೈಜ್ ಒಂದು ಭಾಗ ಕೊಡಿ ಎಂದು ಹೇಳತಕ್ಕದ್ದು ಸರ್ಕಾರ ಒಪ್ಪುವುದಕ್ಕೆ ಆಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ. ಸ್ವಾಮಿ, ಅಬ್ಕಾರಿಯಿಂದ ಮಾತ್ರವೇ ಅಲ್ಲ, ಒಟ್ಟು ಆರ್ಥಿಕ ವಿಕೇಂದ್ರೀಕರಣ ದೃಷ್ಟಿಯಿಂದ ಆಯಾಯ ತಾಲ್ಲೂಕಿನಲ್ಲಿ ಬರತಕ್ಕ ಉತ್ಪನ್ನ ಬಹುಪಾಲು ಆಯಾ ತಾಲ್ಲೂಕುಗಳಿಗೆ ಕೊಡುವುದು ಉತ್ತಮ ನೀತಿ ಅಲ್ಲವೇ?

ಶ್ರೀ ಡಿ. ದೇವರಾಜ್ ಅರಸ್.—ಆಯಾ ತಾಲ್ಲೂಕಿಗೆ ಬರುವ ಉತ್ಪತ್ತಿ ಎಂದರೆ, ಒಂದು ತಾಲ್ಲೂಕಿಗೆ ಬರುವುದಿಲ್ಲ, ಒಂದು ತಾಲ್ಲೂಕಿಗೆ ಬರುತ್ತದೆ. ಹಿಂದೆ ಒಂದು ಸಾರಿ ಫಾರೆಸ್ಟ್ ಏರಿಯಾದಲ್ಲಿ ಫಾರೆಸ್ಟ್ ಬಾಬತು ಹಣ ಅವರಿಗೆ ಕೊಟ್ಟು ಬಿಡಿ ಎಂದು ಹೇಳಿದರು, ಆಯಾಯ ತಾಲ್ಲೂಕುಗಳಿಗೆ ಕೊಡುವುದಾದರೆ ಭದ್ರಾವತಿಯಲ್ಲಿ ಕಾರ್ಖಾನೆ ಇದೆ ಅಲ್ಲಿಂದ ಬರುವ ಉತ್ಪತ್ತಿಯನ್ನು ಅಲ್ಲಿಗೆ ಕೊಟ್ಟು ಬಿಡೋಣ ಎಂದರೆ that will lead to so many other things. ಇದು ಆಯಾಯ ತಾಲ್ಲೂಕಿನ ಪ್ರಶ್ನೆ ಅಲ್ಲ, ಬರುವ ಹಣದಲ್ಲಿ ಪೂಲ್ ಅಪ್ ಮಾಡಿ ಎಲ್ಲೆಲ್ಲಿಗೆ ಉಪಯೋಗಿಸಬೇಕೋ ಅಲ್ಲಿಗೆ ಕೊಡುತ್ತೇವೆ. ಮತ್ತು, ಖರ್ಚು ಮಾಡುತ್ತೇವೆ. ಆಯಾಯ ತಾಲ್ಲೂಕಿನ ಉತ್ಪತ್ತಿ ಆಯಾಯ ತಾಲ್ಲೂಕಿಗೆ ಕೊಡಬೇಕು ಎಂದರೆ ಸರಿಹೋಗುವುದಿಲ್ಲ.

ಶ್ರೀ ಕೆ. ಎಂ. ನಾಗಣ್ಣ.—ಅಬ್ಕಾರಿಯಿಂದ ಬೆಂಗಳೂರು ನಗರದಿಂದ ಬಹುಪಾಲು ಹರಾಜಿನಿಂದ ಹಣ ಬರುವುದರಿಂದ ಬೆಂಗಳೂರು ನಗರ ಕಾರ್ಪೊರೇಷನ್‌ಗೆ ಅದರಿಂದ ಸ್ವಲ್ಪ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.—ಬೆಂಗಳೂರು ನಗರದಿಂದ ಅಬ್ಕಾರಿ ಬೇಕಾದಷ್ಟು ಹಣ ಬರುತ್ತದೆಂದು ತಾವು ಹೇಳುವುದು ಸರಿ. ತಾತ್ವಿಕವಾಗಿ ಬೆಂಗಳೂರಿಗೆ ಕೊಟ್ಟರೆ, ಮೈಸೂರಿಗೆ ಕೊಡಬೇಕು, ಹುಬ್ಬಳ್ಳಿಗೆ ಕೊಡಬೇಕು, ಗುಲ್ಬರ್ಗಕ್ಕೆ ಕೊಡಬೇಕು, ಮಾನ್ಯನದನ್ಯರು ಹೇಳಿದ ಹಾಗೆ ಆಯಾಯ ತಾಲ್ಲೂಕಿಗೆ ಕೊಡಬೇಕಾಗುತ್ತದೆ. ಬೆಂಗಳೂರಿನಲ್ಲಿ ಒಂದು ರೀತಿ ಅಬ್ಕಾರಿ ಹಣ ಕೊಟ್ಟರೆ ಇನ್ನೊಂದು ರೀತಿಯಲ್ಲಿ ಜನರು ಕಾರ್ಪೊರೇಷನ್‌ಗೆ ಹಣ ಕೊಡುತ್ತಿದ್ದಾರೆ.

ಶ್ರೀ ಶರಣಪ್ಪ.—ಈಗ ಟಾಡಿ ಮತ್ತು ಅರಾಕ್ ಮೇಲೆ ಎಷ್ಟೊಪ್ಪೀ ಮುನಿಸಿಪಾಲಿಟಿಯವರು ಆಕ್ಟ್ರಾಯ್ ಹಾಕುತ್ತಿದ್ದಾರೆ. ಅದರ ಮೇಲೆ ಆಕ್ಟ್ರಾಯಿ ಕಲೆಕ್ಟ್ ಮಾಡಿ ಅದರಿಂದ ಮುನಿಸಿಪಾಲಿಟಿಗೆ ಉತ್ಪನ್ನವಾಗತ್ತದೆ, ಅದೇ ಪ್ರಕಾರ ತಾಲ್ಲೂಕು ಬೋರ್ಡು ಆಕ್ಟ್ರಾಯ್ ಹಾಕುವುದಕ್ಕೆ ಅನುವು ಮಾಡಿಕೊಡುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.—ವಿಲೇಜ್ ಪಂಚಾಯತ್ ಲೋಕಲ್ ಬಾಡೀಸ್ ಆಕ್ಟ್‌ನಲ್ಲಿ ಏನೇನು ಅನುಕೂಲ ತಾಲ್ಲೂಕಿಗೆ ಬೋರ್ಡಿಗೆ ಮಾಡಿಕೊಟ್ಟಿದ್ದಾರೆ, ಯಾವ ಯಾವುದರ ಮೂಲಕ ಸುಂಕ ಹಾಕಬೇಕು ಎಂದು ನಿಗದಿ ಮಾಡಿದ್ದಾರೆ ಅದರಲ್ಲಿ ಇದು ಇದ್ದರೆ ಅಭ್ಯಂತರವಿಲ್ಲ. ಇದು ಇದ್ದರೆ ಹಾಕಲಿ.

ಶ್ರೀ ಬಿ. ಬೈರಪ್ಪಾಜಿ.—ತಾಲ್ಲೂಕು ಬೋರ್ಡುಗಳಿಗೆ ಬರುವ ವರಮಾನವೂ ಕಡಿಮೆ ಯಾಗುತ್ತಿದೆ ಮತ್ತು ಈ ಬೋರ್ಡಿನಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಲು ಕೂಡ ಕೆಲವು ಬೋರ್ಡು ಗಳಲ್ಲಿ ಹಣ ಇರುವುದಿಲ್ಲ. ಇದರ ಬಗ್ಗೆ ಸರಕಾರ ಪುನರ್ ವಿಮರ್ಶೆ ಮಾಡಿ ಅಭಿವೃದ್ಧಿ ಮಾಡಲು ಅಬಕಾರಿ ಬಾಬುಗಳಿಂದ ಹಾಗೂ ಇನ್ನಿತರ ಬಾಬುಗಳಿಂದ ಬರುವ ಹಣದ ಶೇಕಡಾ 25 ರಷ್ಟನ್ನಾದರೂ ಈ ಬೋರ್ಡುಗಳಿಗೆ ಕೊಡುವುದು ಸೂಕ್ತವಾಗಿರುತ್ತದೆ. ಇದರ ಬಗ್ಗೆ ಯೋಚಿಸಿ ತಕ್ಕ ಕಾರ್ಯಕ್ರಮ ಸರಕಾರ ತೆಗೆದುಕೊಳ್ಳುತ್ತದೆಯೇ?

ಶ್ರೀ ಡಿ. ದೇವರಾಜ ಅರಸ್.—ಈಗ ಇರುವ ಆಕ್ಟಿನಲ್ಲೇ ಭೂಕಂದಾಯದಲ್ಲಿ ಒಂದು ಭಾಗ ವನ್ನು ಕೊಡಬೇಕೆಂದು ಇದೆ. ಎಕ್ಸೈಜು ಬಾಬಿನಿಂದ ಕೊಡಬೇಕು ಎಂದು ಹೇಳುವುದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ, ತಾಲ್ಲೂಕು ಬೋರ್ಡುಗಳ ಹಣಕಾಸಿನ ಪರಿಸ್ಥಿತಿ ಅಷ್ಟು ಸಾಧುವಾಗಿಲ್ಲ ಎನ್ನುವುದು ನಮಗೂ ಕಂಡು ಬಂದಿದೆ. ಅದಕ್ಕೆ ಯಾವ ರೀತಿ ಸಹಾಯ ಮಾಡಬಹುದು ಎನ್ನುವುದನ್ನು ವಿಚಾರ ಮಾಡಬೇಕೆಂದು ಸರಕಾರ ಗಮನಿಸುತ್ತದೆ, ಆದರೆ ಮಾನ್ಯ ಸದಸ್ಯರು ಹೇಳುವ ಹಾಗೆ ಎಕ್ಸೈಜು ಬಾಬಿನಿಂದ ಕೊಡಬೇಕು ಎನ್ನುವುದನ್ನು ಒಪ್ಪುವುದಕ್ಕಾಗುವುದಿಲ್ಲ.

Ban on grant of land in Channarayapatna Taluk

799. Sri H. C. SRIKANTAIAH (Sravanabelagola).—

Will the Minister for Revenue be pleased to state:—

(*a*) whether it has come to the notice of the Government that the ban imposed on grant of lands in Channarayapatna taluk has not yet been lifted;

(*b*) if so, when it will be lifted?

Sri N. HUTCHAMASTHY GOWDA (Minister for Revenue).—

(*a*) There is no ban on the grant of lands in the taluk to persons eligible as per rules.

(*b*) Does not arise.

ಶ್ರೀ ಪೆಟ್. ಸಿ. ಶ್ರೀಕಂಠಯ್ಯ.—ಇಲ್ಲಿ ಉತ್ತರದಲ್ಲಿ ಭೂಮಿಯನ್ನು ಮಂಜೂರು ಮಾಡಲಿಕ್ಕೆ ನಿಷೇಧವೇನೂ ಇರುವುದಿಲ್ಲ ಎಂದು ಇದೆ. ಆದರೆ ಇಲ್ಲಿ ಮುಳುಗಡೆಯಾಗುವ ಪ್ರದೇಶದಲ್ಲಿ ಒಂದು ಎಕರೆ ಕೂಡ ಕೊಡಕೂಡದು ಎಂದು ಇಲ್ಲಿ ಹೇಳುತ್ತಿದ್ದಾರೆ ಮತ್ತು ಇದರಿಂದ ಕೆಲವೆರಿಗೆ ಭೂಮಿ ಕೂಡ ಕೊಡುತ್ತಿಲ್ಲ ಎಂದು ಮಾನ್ಯ ಮಂತ್ರಿಗಳು ಇಲ್ಲಿಗೆ ಬಂದಾಗ ಮನವಿ ಕೂಡ ಸಲ್ಲಿಸಿದ್ದರು. ಇದು ಸರಕಾರದ ಗಮನಕ್ಕೆ ಬಂದಿದೆಯೇ?

† ಶ್ರೀ ಎನ್ ಹುಚ್ಚಮಾಸ್ತಿಗೌಡ.—ಮೊದಲು 1969 ರಲ್ಲಿ ಹಾಸನ, ಆಲೂರು, ಸಕಲೇಶಪುರ ಹೊಳೆನರಸೀಪುರ ಮತ್ತು ಚನ್ನರಾಯಪಟ್ಟಣದ ಕೆಲವು ಭಾಗಗಳಲ್ಲಿ ಶೇಕಡಾ ಐವತ್ತರಷ್ಟು ಭೂಮಿ ಯನ್ನು ಹೇಮಾವತಿ ಯೋಜನೆಯಲ್ಲಿ ಮುಳುಗಡೆಯಾದ ರೈತರಿಗೆ ಕೊಡಲು ರಿಸರ್ವ್ ಮಾಡ ಬೇಕೆಂದು ಆಜ್ಞೆಯಾಯಿತು. ಇದಾದ ಮೇಲೆ 8-1-1971 ರಲ್ಲಿ 1562 ಎಕರೆ 27 ಗುಂಟೆಯಷ್ಟು ಭೂಮಿಯನ್ನು ಚನ್ನರಾಯಪಟ್ಟಣದ ತಾಲ್ಲೂಕಿನಲ್ಲಿ ರಿಸರ್ವ್ ಮಾಡಬೇಕೆಂದು ಆಜ್ಞೆಯಾಯಿತು. ಇದಾದನಂತರ 6-4-1972 ರಲ್ಲಿ 1068 ಎಕರೆ 21 ಗುಂಟೆ ಭೂಮಿಯನ್ನು ರಿಸರ್ವ್ ಮಾಡಬೇಕೆಂದೂ ಆರ್ಡರು ಆಗಿದೆ. ಉಳಿದ ಜಮೀನು ಎಂದರೆ ಚನ್ನರಾಯಪಟ್ಟಣದ ತಾಲ್ಲೂಕಿನಲ್ಲೇ